ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ    ದಿನಾಂಕ : DATE: 12/3/2020

# ಕ್ಲಬ್‌ಗಳ ಪರಿಶೀಲನೆಗೆ ಸದನ ಸಮಿತಿ ರಚನೆ

ವಿಧಾನ ಪರಿಷತ್: ಸರಕಾರಿ ನಿವೇಶನದಲ್ಲಿ ಗುತ್ತಿಗೆ ಪಡೆದು ಬೆಂಗಳೂರಿನಲ್ಲಿ ನಡೆಸುತ್ತಿರುವ ಕ್ಲಬ್‌ಗಳು ಸರಿಯಾಗಿ ನಿರ್ವಹಿಸುತ್ತಿವೆಯೇ ಎಂಬುದನ್ನು ಪತ್ತೆ ಹಚ್ಚಲು ಸದನ ಸಮಿತಿ ರಚನೆ ಮಾಡಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.



ಬುಧವಾರ ವಿಧಾನ ಪರಿಷತ್ತಿನಲ್ಲಿ ಪ್ರಶ್ನೋತ್ತರ ವೇಳೆ ಕಾಂಗ್ರೆಸ್ ಸದಸ್ಯ ಎಚ್.ಎಂ.ರೇವಣ್ಣ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿ, ಎಲ್ಲರ ಸಲಹೆಗಳನ್ನು ಗೌರವಿಸುತ್ತೇನೆ. ಕ್ಲಬ್‌ಗಳ ಪರಿಶೀಲಿಸಲು ಸದನ ಸಮಿತಿ ಮಾಡಲು ತಡೆ ಇಲ್ಲ, ಆದರೆ, ಈ ಹಿಂದೆ ಹ್ಯಾರಿಸ್ ಸಮಿತಿ ಮಾಡಲಾಗಿತ್ತು. ಅದರ ವರದಿ ಏನಾಗಿದೆ ಎಂಬುದನ್ನು ಪರಿಶೀಲಿಸಿ, ಅದು ಯಾಕೆ ವಿಫಲವಾಗಿದೆ ಎಂಬುದನ್ನು ಪತ್ತೆ ಮಾಡಲಾಗುವುದು. ಅದೇ ರೀತಿ ಈಗ ರಚನೆಯಾಗುವ ಸಮಿತಿ ವಿಫಲವಾಗಬಾರದು ಎಂದು ತಿಳಿಸಿದರು.

ಈ ಸಮಿತಿಯಲ್ಲಿ ಮೂರು ಪಕ್ಷದ ಸದಸ್ಯರನ್ನೊಳಗೊಂಡಂತೆ ಹಾಗೂ ವಕೀಲರ ಸಲಹೆ ಪಡೆದುಕೊಳ್ಳಬೇಕಿದೆ. ಇನ್ನು ಮುಂದೆ ಕಟ್ಟುನಿಟ್ಟಾಗಿ ಕ್ರಮ ಕೈಗೊಳ್ಳಬೇಕು. ಆ ಮೂಲಕ ಅವರನ್ನು ಬಂದೋಬಸ್ತ್‌ನಲ್ಲಿ ಇಟ್ಟುಕೊಳ್ಳಲು ಕ್ರಮಕೈಗೊಳ್ಳಲಾಗುವುದು ಎಂದರು.

ಈ ವೇಳೆ ಮಧ್ಯ ಪ್ರವೇಶಿಸಿದ ವಿಧಾನ ಪರಿಷತ್ ಸದಸ್ಯ ಶರಣಪ್ಪ ಮಟ್ಟೂರ್ ಮಾತನಾಡಿ, ಕೂಡಲೇ ಕ್ಲಬ್‌ಗಳ ಮೇಲೆ ಸಮಿತಿ ರಚನೆ ಮಾಡಿ ಪರಿಶೀಲನೆಗೆ ಹೋಗುವುದು ಬೇಡ. ಇಲ್ಲಿಯೂ ಕೂಡ ಸ್ಟೇ ತರುವವರಿದ್ದಾರೆ. ಮೊದಲು ಕ್ಲಬ್‌ಗಳ ವ್ಯಾಲೇಷನ್ ಪತ್ತೆ ಹಚ್ಚಬೇಕು. ಅಲ್ಲದೇ ಈ ಕ್ಲಬ್‌ಗಳಿಂದ ಸರಕಾರಕ್ಕೆ ಎಷ್ಟು ಆದಾಯ ಬರಬೇಕಿದೆ ಅದನ್ನು ಪತ್ತೆ ಹಚ್ಚಬೇಕು. ಏಕಾಏಕಿ ದಾಳಿ ಮಾಡಿದರೆ ಸ್ಟೇ ತರುತ್ತಾರೆ. ಹೀಗಾಗಿ ಇಧನ್ನು ಸೂಕ್ಷ್ಮವಾಗಿ ಪರಿಗಣಿಸಬೇಕು. ಆಗ ಮಾತ್ರ ಅವರ ಪರವಾನಿಗೆ ರದ್ದು ಪಡಿಸಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು. ಇದಕ್ಕೆ ಧ್ವನಿಗೂಡಿಸಿದ ಎಚ್.ಎಂ.ರೇವಣ್ಣ, ಸದನ ಸಮಿತಿ ಮಾಡಿ ಎಲ್ಲರನ್ನು ಅದರಲ್ಲಿ ಸೇರಿಸಬೇಕು. ಅದಕ್ಕೆ ಸಮಯ ನಿಗದಿ ಮಾಡಬೇಕು ಎಂದರು. ವಿಧಾನ ಪರಿಷತ್ ಸದಸ್ಯ ಬಸವರಾಜ್ ಹೊರಟ್ಟಿ ಮಾತನಾಡಿ, ಸರಕಾರ ಇದ್ದು, ಅಧಿಕಾರ ಇದ್ದರೂ ಕೂಡ ಕ್ಲಬ್‌ನವರಿಗ್ಯಾಕೆ ಹೆದರಬೇಕು. ಸರಕಾರಿ ಆಸ್ತಿಯನ್ನು ದುರ್ಬಳಕೆ ಮಾಡಿಕೊಳ್ಳುವವರೆ ಹೆದರದಿದ್ದಾಗ ನಾವ್ಯಾಕೆ ಹೆದರಬೇಕು ಎಂದರು.

ಇಂತಹ ವಿಷಯಕ್ಕೆ ಅಡ್ವೋಕೇಟ್ ಜನರಲ್ ಅವರೆ ಸ್ಟೇ ತರುತ್ತಾರೆ ಅಂದರೆ ನಾಚಿಕೆಗೇಡಿನ ಸಂಗತಿ. ಆದ್ದರಿಂದ ನಾವೆಲ್ಲ ನಿಮ್ಮ ಜತೆ ಇದ್ದೇವೆ. ಇದಕ್ಕೊಂದು ಸ್ಪಷ್ಟ ನಿರ್ಧಾರ ಕೈಗೊಂಡು ಸರಕಾರ ಕ್ರಮಕ್ಕೆ ಮುಂದಾಗಬೇಕೆಂದರು. ಆಗ ಬಿಜೆಪಿ ಸದಸ್ಯ ನಾರಾಯಣಸ್ವಾಮಿ ಮಾತನಾಡಿ, ಸರಕಾರಿ ಜಮೀನು ಪಡೆದಿದ್ದಲ್ಲದೇ, ಎಲ್ಲ ಸರಕಾರಗಳ ಜತೆ ಕೈಜೋಡಿಸಿಕೊಂಡು ಕ್ಲಬ್ ಮಾಲೀಕರು ಹೋಗುತ್ತಿದ್ದಾರೆ. ಅವರು 100 ಕೋಟಿ ರು. ತೆರಿಗೆ ಕಟ್ಟಬೇಕು. ಆದರೂ ಅವರಿಗೆ ಭಯವಿಲ್ಲ. ಇದರ ಕರ್ಮಕಾಂಡ ಬಹಳ ಇದೆ. ಸರಕಾರಿ ಜಾಗದಲ್ಲಿ ಅವರು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ವಿಧಾನ ಪರಿಷತ್ ಸದನದ ಸಮಿತಿ ರಚನೆ ಮಾಡಬೇಕೆಂದು ಮನವಿ ಮಾಡಿದರು.